**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**<u>ಸಿ.ಸಿ. 710/2021</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಲತಾ .ಕೆ | ಪ್ರಾ.ಸಾ.8 |
| ತಂದೆಯ/ಗಂಡನ ಹೆಸರು | : | ಕುಮಾರ್. ಎಲ್ | ಚಾ.ಸಾ.10 |
| ವಯಸ್ಸು | : | 44 ವರ್ಷ | |
| ಕೆಲಸ | : | ಅಬಕಾರಿ ಪೊಲೀಸ್ ನಿರೀಕ್ಷಕರು, ತುಮಕೂರು | ಸಾ ಪ್ರ ಬೋ |
| ವಾಸ | : | ತುಮಕೂರು | ದಿಃ27.06.2025 |

**<u>ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ</u>**

ನಾನು ದಿನಾಂಕ 17.08.2017 ರಿಂದ 04.05.2022 ರವರೆಗೆ ಹೊಳಲ್ಕೆರೆ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 30.04.2020 ರ ಅಬಕಾರಿ ಉಪ ಆಯುಕ್ತರವರ ಆದೇಶದಂತೆ ಹಾಗೂ ಪೊಲೀಸ್ ಉಪ ನಿರೀಕ್ಷಕರು, ಚಿತ್ರಹಳ್ಳಿ ಗೇಟ್ ಪೊಲೀಸ್ ಇವರ ನಿವೇಧನೆಯಂತೆ ದಿನಾಂಕ 29.05.2020 ರಂದು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಂತಹ ವಾಹನಗಳಾದ ಸರ್ಕಾರಿ ಆಂಬುಲೆನ್ಸ್ ಮತ್ತು ಒಂದು ಓಮಿನಿ ವಾಹನವನ್ನು ನಮ್ಮ ವಶಕ್ಕೆ ಪಡೆದುಕೊಂಡು ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆರವರಿಗೆ ಸ್ವೀಕೃತಿ ಹಿಂಬರಹನ್ನು ನೀಡಿರುತ್ತೇನೆ. ಸಾಕ್ಷಿ ದಿನಾಂಕ 29.05.2020 ರಂದು ವಾಹನಗಳನ್ನು ಸ್ವೀಕರಿಸಿಕೊಂಡ ಬಗ್ಗೆ ನೀಡಿದ ಹಿಂಬರಹವನ್ನು ನೋಡಿ ಗುರುತಿಸಿದ್ದು, ಸದರಿ ಹಿಂಬರಹವನ್ನು ನಿಪಿ.14 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.5 ಮತ್ತು 6 ರ ಛಾಯಾಚಿತ್ರಗಳಲ್ಲಿ ಅಮಾನತ್ತುಪಡಿಸಿಕೊಂಡ ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : 4 ಮತ್ತು 5ನೇ ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.**

**ಪಾಟೀ ಸವಾಲು : 1 ರಿಂದ 3 ನೇ ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ